# ಪಾಠಗಳಿಗೆ ಪೀಠಿಕೆ

ಈ *ಮಾರ್ಗದರ್ಶಿಯಲ್ಲಿಯ* ಎಂಟು ಪಾಠಗಳು ರಕ್ಷಣೆ ಹೊಂದಲು ಏನು ಮಾಡಬೇಕೆಂಬುದನ್ನು ಕಲಿಯುವ ಅವಶ್ಯಕತೆಯುಳ್ಳವರೊಂದಿಗೆ ಪ್ರಾರಂಭದ ಅಧ್ಯಯನಗಳಂತೆ ಮಹತ್ವದವುಗಳಾಗಿವೆ. ಅವು ತರ್ಕಬದ್ಧವಾಗಿ ಒಂದು ಪಾಠದಿಂದ ಇನ್ನೊಂದು ಪಾಠಕ್ಕೆ ಮುಂದುವರಿಯುತ್ತವೆ ಮತ್ತು ಈ ಪುಸ್ತಕದಲ್ಲಿ ಅವು ಕಂಡು ಬರುವಂತೆ ಲಾಭಕರವಾಗಿ ಉಪಯೋಗಿಸಲ್ಪಡಬಹುದು. ಹೀಗಿದ್ದರೂ, ಒಬ್ಬ ಶಿಕ್ಷಕನು ಕಲಿಯುವವನು ಈಗಾಗಲೇ ಮೊದಲಿನ ಮೂರು ಪಾಠಗಳಲ್ಲಿರುವಂಥದ್ದನ್ನು ಈಗಾಗಲೇ ಅರ್ಥ ಮಾಡಿಕೊಳ್ಳುತ್ತಾನೆ ಮತ್ತು ನಂಬುತ್ತಾನೆಂದು ತಿಳಿದುಕೊಂಡು, *"ರಕ್ಷಣೆಯ"* ಪಾಠದೊಂದಿಗೆ ಪ್ರಾರಂಭಿಸಲು ಬಯಸಬಹುದು.

ಧಾರ್ಮಿಕ ವಿಷಯಗಳ ಸೂಕ್ಷ್ಮ ಸ್ವಾಭಾವದ ಕಾರಣದಿಂದ, ಕೆಲವು ಸಲ, ಅನಂತರದ ಅಧ್ಯಯನಗಳಿಗೆ ಅಸ್ತಿವಾರಹಾಕುವದಕ್ಕೆ ಸಹಾಯ ಮಾಡುವ ಪಾಠಗಳೊಂದಿಗೆ ಪ್ರಾರಂಭಿಸುವುದು ಮಹತ್ವದ್ದಾಗಿದೆ. ಈ ಪ್ರಾರಂಭದ ಪಾಠಗಳು, ಒಬ್ಬನು ರಕ್ಷಿಸಲ್ಪಡಬೇಕಾದರೆ, ಏನು ಮಾಡಬೇಕೆಂಬುದನ್ನು ಕಲಿಯಲು ವಿಷಯಗಳನ್ನೊಳಗೊಂಡಿರಲಿಕ್ಕಿಲ್ಲ. ಆದರೆ ಹಿನ್ನಲೆಯ ಸತ್ಯಗಳನ್ನು ಅರ್ಥಮಾಡಿಕೊಳ್ಳಲಾಗದಿದ್ದರೆ ಒಪ್ಪಿಕೊಳ್ಳದೇ ಇರುವದಕ್ಕೆ ಕಾರಣವಾಗುವ ಸತ್ಯಗಳನ್ನು ಬೋಧಿಸುವಲ್ಲಿ ಬೈಬಲನ್ನು ಅನುಸರಿಸುವ ವಿಧಾನದಲ್ಲಿ ವಿದ್ಯಾರ್ಥಿಯನ್ನು ತರಬೇತಿಗೊಳಿಸುವಲ್ಲಿ ಅವು ಸಹಾಯಕವಾಗಿರುವವು.

ಈ *ಮಾರ್ಗದರ್ಶಿಯಲ್ಲಿ* ಎಂಟು ಪಾಠಗಳು ವಿಚಾರಸರಣಿಯನ್ನು ಹೀಗೆ ಬೆಳೆಸುವುದು:

ಪಾಠ 1. "ಪಾಪ ಮತ್ತು ಮರಣದ ಮೂಲ ಯಾವುದು?" ದೇವರು ತನ್ನ ಒಳ್ಳೇ ಸೃಷ್ಟಿಯನ್ನು ಶಾಪದೊಳಗ ಹಾಕುವಂತೆ ಮಾಡಲು ಏದೆನ್ ತೋಟದಲ್ಲಿ ಏನು ಸಂಭವಿಸಿತೆಂಬುದನ್ನು ಈ ಪಾಠವು ಪ್ರಸ್ತಾಪಿಸುತ್ತದೆ. ಈ ಪಾಠದಲ್ಲಿ ಶಿಕ್ಷಕನು, ಆದಾಮ, ಹವ್ವರು ಒಳ್ಳೆಯದರ ಮತ್ತು ಕೆಟ್ಟದ್ದರ, ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿನ್ನುವದರಿಂದ ಪಾಪವು ಲೋಕದೊಳಗೆ ಪ್ರವೇಶಿಸಿತು ಮತ್ತು ಮರದ ಹಣ್ಣನ್ನು ತಿನ್ನುವದರಿಂದ ಮಾನವ ಕುಲವು ಒಳ್ಳೆಯದರ ಮತ್ತು ಕೆಟ್ಟದ್ದರ ಸಮಸ್ಯೆಗಳನ್ನು ಹೊಂದಿಕೊಂಡಿತು ಎಂಬುದನ್ನು ತೋರಿಸಬಹುದು. ಹಾಗಿದ್ದರೂ, ಶಿಶುಗಳು ಪಾಪಿಗಳಾಗಿ ಇಲ್ಲವೇ ಒಳ್ಳೆಯದರ ಮತ್ತು ಕೆಟ್ಟದ್ದರ ಅರುಹುವುಳ್ಳವುಗಳಾಗಿ ಜನಿಸುವದಿಲ್ಲ. ಜೀವನದಲ್ಲಿ, ಅನಂತರದಲ್ಲಿ ಈ ತಿಳುವಳಿಕೆಯನ್ನು ಬೆಳಿಸಿಕೊಳ್ಳುತ್ತೇವೆ.

ಪಾಠ 2. "ದೇವರ ಯೋಜನೆ ಯಾವುದು?" ಇದು ಅಬ್ರಹಾಮನನ್ನು ದೊಡ್ಡ ಜನಾಂಗವಾಗುವಂತೆ ಮಾಡುವ ಮತ್ತು ಅಬ್ರಹಾಮನ ಸಂತತಿಯ ಮುಖಾಂತರ ಲೋಕದ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವ ದೇವರ ಯೋಜನೆಯನ್ನು ಮುಂದಿಡುತ್ತದೆ. ಧರ್ಮಶಾಸ್ತ್ರದ ಮುಖಾಂತರ (ಇದು ಆಶೀರ್ವಾದವನ್ನು ತರುವದರ ಬದಲು ಶಾಪವನ್ನು ತಂದಿತು). ಲೋಕವನ್ನು ಆಶೀರ್ವಾದಿಸುವೆನೆಂದು ದೇವರು ಎಂದೂ ಯೋಚಿಸಲಿಲ್ಲ, ಆದರೆ, ನಮ್ಮ ಪಾಪಗಳಿಗಾಗಿ ತನ್ನ ಮಗನ ಮರಣದ ಮುಖಾಂತರ ಮಾನವ ಜನಾಂಗವನ್ನು ಆಶೀರ್ವಾದಿಸುವೆನೆಂದು ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸುವ ಮೊದಲೇ ಯೋಜಿಸಿದನು. ಧರ್ಮಶಾಸ್ತ್ರದ ಉದ್ದೇಶವು

ಮಾನವ ಕುಲವನ್ನು ಯೇಸುವಿನ ಬಳಿಗೆ ತರುವದಾಗಿತ್ತು, ಆದರೆ ಈಗ ಯೇಸು ಕ್ರಿಸ್ತನ ವಿಶ್ವಾಸವು ಬಂದಿರುವುದು, ನಾವು ಧರ್ಮಶಾಸ್ತ್ರದ ಅಧೀನತೆಯಲ್ಲಿ ಇರುವವರಲ್ಲ. ನಾವು ಯೇಸು ಕ್ರಿಸ್ತನ ನೂತನ ಒಡಂಬಡಿಕೆಯ ಅಧೀನತೆಯಲ್ಲಿ ಇರುವವರಾಗಿದ್ದೇವೆ.

ಪಾಠ 3. "ಯೇಸುವು ಮಾನವನಿಗಾಗಿ ಹೋಸ ಮಾರ್ಗವಾಗಿರುವನೋ?" ಪ್ರಾಣಿಯಜ್ಞಗಳೊಂದಿಗೆ ಧರ್ಮಶಾಸ್ತ್ರವ*ನ್ನಲ್ಲ*, ಆದರೆ ಯೇಸುವನ್ನು ಮಾನವ ಕುಲಕ್ಕಾಗಿ ರಕ್ಷಣೆಯ *ಮಾರ್ಗದಂತೆ* ಇದು ಯೇಸುವನ್ನು ಮುಂದಿಡುತ್ತದೆ, ಈ *ಮಾರ್ಗವು* ಯೆರೂಸಲೇಮಿನಲ್ಲಿ ಪ್ರಸಂಗಿಸಲು ಪ್ರಾರಂಭಿಸಲ್ಪಟ್ಟಿತು ಮತ್ತು ಉಳಿದ ಜಗತ್ತಿನಲ್ಲೆಲ್ಲಾ ಪ್ರಸರಿಸಲ್ಪಟ್ಟಿತು. ಪ್ರಾಣಿ ಯಜ್ಞಗಳು ಶಿಲುಬೆಯ ಮೇಲಿನ ಯೇಸುವಿನ ಮರಣದ ಒಂದು ಛಾಯೆಯಾಗಿರುವಂತೆ ದೇವರು ಹೇಗೆ ಯೋಚಿಸಿದನೆಂಬುದನ್ನು ಶಿಕ್ಷಕನು ತೋರಿಸಬೇಕು. ಆತನ ಮರಣದನಂತರ, ನೂತನ ಮಾರ್ಗವು ಯೆರೂಸಲೇಮಿನಲ್ಲಿ ಪ್ರಾರಂಭಗೊಂಡು ಲೋಕದ ಎಲ್ಲಾ ಕಡೆಗಳಲ್ಲಿ ಪ್ರಸಂಗಿಸಲು ಪ್ರಾರಂಭಿಸಲ್ಪಡುವುದು. ಯೆರೂಸಲೇಮಿನಲ್ಲಿ ಕ್ಷಮಾಪಣೆಯ ಮಾರ್ಗದಂತೆ ಪ್ರಸಂಗಿಸಲ್ಪಟ್ಟಿದ್ದು ಎಲ್ಲಾ ಜನಾಂಗಗಳಿಗೆ ಎಲ್ಲಾ ಕಾಲಗಳಲ್ಲಿ ಅಗತ್ಯವಾದದ್ದಾಗಿದೆ.

ಪಾಠ 4. "ನೀನು ರಕ್ಷಿಸಲ್ಪಟ್ಟಿರುವಿಯೋ?" ಯೇಸುವಿನ ರಕ್ತದಿಂದ ಒದಗಿಸಲ್ಪಟ್ಟ ಪಾಪಗಳ ಕ್ಷಮಾಪಣೆಯನ್ನು ಒಬ್ಬನು ಸ್ವೀಕರಿಸಬೇಕಾದರೆ ಯಾವುದರ ಅಗತ್ಯತೆಯಿದೆ ಎಂಬುದನ್ನು ಈ ಪಾಠ ತೋರಿಸುತ್ತದೆ. ಯೇಸುವಿನ ಬಗ್ಗೆ ಬೋಧಿಸಲ್ಪಟ್ಟವರು ಯೇಸುವಿನಲ್ಲಿ ನಂಬಬೇಕು, ಯೇಸುವಿಗಾಗಿ ಜೀವಿಸಲು ತೀರ್ಮಾನಿಸಿಕೊಳ್ಳಬೇಕು, ಯೇಸುವಿನಲ್ಲಿ ತಮ್ಮ ನಂಬಿಕೆಯನ್ನು ಅರಿಕೆಮಾಡಬೇಕು, ಮತ್ತು ಬಾಪ್ತಿಸ್ಮದಲ್ಲಿ ಯೇಸುವಿನೊಂದಿಗೆ ಹೂಣಲ್ಪಡಬೇಕು. ಅವರು ತಮ್ಮ ಪಾಪಗಳಿಂದ ರಕ್ಷಿಸಲ್ಪಡುವರು ಎಂಬುದನ್ನು ಶಿಕ್ಷಕನು ತೋರಿಸಬೇಕು. ಯೇಸುವಿನ ರಕ್ತದ ಮುಖಾಂತರ ಈ ಕ್ಷಮಾಪಣೆಯು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದವರಿಗಾಗಿ ಇರುವುದು. ಕ್ರಿಸ್ತನಲ್ಲಿ ಇರುವ ಎಲ್ಲರೂ ಆತನ ಒಂದು ದೇಹದಲ್ಲಿ, ಕ್ರಿಸ್ತನ ಸಭೆಯಲ್ಲಿ ಇರುವರು.

ಪಾಠ 5. "ಕ್ರಿಸ್ತನ ಸಭೆಯ ಬಗ್ಗೆ ಬೈಬಲ್ ಏನು ಹೇಳುತ್ತದೆ?" ಎಲ್ಲಾ ಕ್ರೈಸ್ತರಿಂದ ಮಾಡಲ್ಪಟ್ಟಂತೆ ಕ್ರಿಸ್ತನ ಸಭೆಯನ್ನು ಇದು ತೋರಿಸುವುದು. ಈ ವಿಶ್ವಾಸಿಗಳ ದೇಹಕ್ಕೆ ಯೇಸುವು, ಕಟ್ಟುವವನೂ, ಅಸ್ತಿವಾರವೂ, ಶಿರಸ್ಸೂ, ಮತ್ತು ರಕ್ಷಕನೂ ಆಗಿದ್ದಾನೆ. ಅವರ ಮೇಲೆ ಶಿರಸ್ಸಿನಂತೆ, ಆತನು ತನ್ನ ದೇಹವು ಒಂದೇ ಐಕ್ಯವಾದ ದೇಹವಾಗಿ ಸಾಮರಸ್ಯದಲ್ಲಿ ಮತ್ತು ಪಕ್ಷಪಂಗಡಗಳಿಲ್ಲದೇ ಜೀವಿಸಬೇಕೆಂದು ಬಯಸುತ್ತಾನೆ. ಅವರಿಗಾಗಿರುವ ಪ್ರೀತಿಯ ನಿಮಿತ್ತವಾಗಿ, ಅವರನ್ನು ಕಳಂಕ, ಸುಕ್ಕು ಮುಂತಾದ ಯಾವುದೂ ಇಲ್ಲದೇ ಅವರು ಪರಿಶುದ್ಧರೂ, ದೋಷವಿಲ್ಲದವರೂ, ಆಗಿರುವಂತೆ ಅವರನ್ನು ತನಗೆ ಪ್ರತಿಷ್ಠಿಸಿಕೊಳ್ಳಲು ಆತನು ಮರಣ ಹೊಂದಿದನು.

ಪಾಠ 6. "ಕ್ರಿಸ್ತನ ಸಭೆಯ ಸಂಘಟನೆ ಯಾವುದಾಗಿತ್ತು?" ಎಂದೂ - ಬದಲಾಗದ ಸಭೆಯ ಸಂಘಟನೆಯಲ್ಲಿ ಇಡೀಯಾಗಿ, ಶಿರಸ್ಸಾದ ಯೇಸುವು, ಮತ್ತು ಮೂಲದಲ್ಲಿಯ ಹನ್ನೆರಡು ಜನ ಅಪೊಸ್ತಲರು ಮತ್ತು ಹೊಸ ಒಡಂಬಡಿಕೆಯ ಪ್ರವಾದಿಗಳು ಇರುವರೆಂದು ಇದು ತೋರಿಸುತ್ತದೆ. ಸ್ಥಳಿಕ ಸಭೆಯಲ್ಲಿ ಸೇವೆ ಮಾಡುತ್ತಿರುವವರು ಹಿರಿಯರು (ಬಿಷಪರು ಮತ್ತು ಪಾಸ್ಟರರು ಎಂದು ತಿಳಿಯಲ್ಪಡುತ್ತಾರೆ), ಡೀಕನರು, ಸುವಾರ್ತಿಕರು, ಬೋಧಕರು, ಮತ್ತು ಸದಸ್ಯರು. ಇವರೆಲ್ಲರಿಗೆ ಅವರವರ ಕರ್ತವ್ಯಗಳೂ ಅರ್ಹತೆಗಳೂ ಇರುವವು.

ಪಾಠ 7. "ಸ್ವೀಕಾರಯೋಗ್ಯವಾಗಿ ನೀನು ದೇವರನ್ನು ಆರಾಧಿಸುವಿಯೋ?" ದೇವರು ತನಗೆ ಆರಾಧನೆಯಲ್ಲಿ ಅಪೇಕ್ಷಿಸುವ ಸಂಗತಿಗಳನ್ನು ಇದು ಪ್ರಸ್ತಾಪಿಸುತ್ತದೆ.

ಆತ್ಮದಲ್ಲಿ ಮತ್ತು ಸತ್ಯದಲ್ಲಿ ಇರುವಂಥ ಆರಾಧನೆಯ ಮುಖಾಂತರ ದೇವರಿಗೆ ಸ್ವೀಕಾರವಾದ ರೀತಿಯಲ್ಲಿ ಆರಾಧಿಸುವದನ್ನು ಸಭೆಯು ಹುಡುಕತಕ್ಕದ್ದೆಂದು ಶಿಕ್ಷಕನು ತೋರಿಸಬೇಕು. ಆರಾಧನೆಯಲ್ಲಿ ತಾನು ಅಪೇಕ್ಷಿಸುವ ಸಂಗತಿಗಳನ್ನು ದೇವರು ನಮಗೆ ಕೊಟ್ಟಿದ್ದಾನೆ. ನಾವು ಮಾಡಬೇಕೆಂದು ಆತನು ಹೇಳಿದ್ದರಲ್ಲಿ ಯಾವುದನ್ನೂ ತೆಗೆಯಬಾರದು ಇಲ್ಲವೇ ಅದಕ್ಕೆ ಯಾವುದನ್ನೂ ಕೂಡಿಸಬಾರದು ಎಂದು ಆತನು ಹೇಳಿದ್ದಾನೆ.

ಪಾಠ 8. "ನಿನ್ನ ನಿತ್ಯವಾದ ಅಂತಿಮಸ್ಥಿತಿ ಏನಾಗಿರುವುದು?" ಕ್ಷಮಿಸಲ್ಪಡದ ಪಾಪಿಗಳು ಮತ್ತು ಕ್ಷಮಿಸಲ್ಪಟ್ಟ ಪಾಪಿಗಳು ಎಂಬ ಎರಡೇ ಗುಂಪುಗಳು ಇರುವವು ಎಂಬ ಸತ್ಯವನ್ನು ಇದು ಹೇಳುತ್ತದೆ. ಎಲ್ಲರೂ ಪಾಪಿಗಳೇ ಯಾಕಂದರೆ ದೇವರ ಮಟ್ಟ ಗಳು ಎಲ್ಲರಿಂದಲೂ ಮುರಿಯಲ್ಪಟ್ಟಿವೆ. ಕ್ಷಮಿಸಲ್ಪಡದ ಪಾಪಿಗಳ ಅಂತಿಮಸ್ಥಿತಿಯು ಯಾತನೆ, ಮತ್ತು ನಿತ್ಯ ಶಿಕ್ಷೆಯಾಗಿರುವುದು, ಕ್ಷಮಿಸಲ್ಪಟ್ಟ ಪಾಪಿಗಳ ಅಂತಿಮ ಸ್ಥಿತಿಯು ಪರಲೋಕದಲ್ಲಿ ದೇವರೊಂದಿಗೆ ನಿತ್ಯ ಸಂತೋಷವಾಗಿರುವುದು. ಕ್ಷಮಿಸಲ್ಪಟ್ಟವರು ದೇವರಿಗೆ ವಿಧೇಯರಾಗಿರುವವರು ಆಗಿರುವರು; ಮತ್ತು ಕ್ಷಮಿಸಲ್ಪಡದೇ ಇರುವವರು ಆತನಿಗೆ ವಿಧೇಯರಾಗಿರದೇ ಇರುವರು. ಮಾನವ ಕುಲದ ನಿತ್ಯವಾದ ಅಂತಿಮಸ್ಥಿತಿಯು ದೇವರ ಚಿತ್ತಕ್ಕೆ ಮಾನವ ಕುಲದ ಉತ್ತರದ ಮೇಲೆ ಅವಲಂಭಿಸಿರುತ್ತದೆ.

**ಆಲೋಚನೆಗಳು**

ಈ ಎಂಟು ಪಾಠಗಳು, ಯೋಗ್ಯವಾಗಿ ಅರ್ಥ ಮಾಡಿಕೊಳ್ಳಲ್ಪಟ್ಟಾಗ ಮತ್ತು ಪ್ರಸ್ತುತ ಪಡಿಸಲ್ಪಟ್ಟಾಗ, ವಿದ್ಯಾರ್ಥಿಯನ್ನು ಅವನ ರಕ್ಷಣೆಯು ಯೇಸುವಿನ ಮೇಲೆ ಅವಲಂಭಿಸಿರುವುದು ಮತ್ತು ಅವನ ಜೀವಿತವು ಆತನಲ್ಲಿ ನಂಬಿಕೆಯೊಂದಿಗೆ ಮತ್ತು ಆತನ ಚಿತ್ತಕ್ಕೆ ವಿಧೇಯತೆಯಲ್ಲಿ ಜೀವಿಸಲ್ಪಡತಕ್ಕದ್ದು ಎಂಬುದರ ಅರುಹಿಗೆ ತರಲ್ಪಡಬೇಕು. ಯೇಸುವಿನ ಅಧಿಕಾರವನ್ನು ದೇವರ ಕೃಪೆಯನ್ನು, ದೇವರ ಪ್ರೀತಿ ಯನ್ನು, ಯೇಸುವನ್ನು ದೇವರ ಕುಮಾರನಂತೆ ಗೌರವಿಸುವ ಅಗತ್ಯತೆಯನ್ನು ಮತ್ತು ಯೇಸುವಿನೊಂದಿಗೆ ವೈಯಕ್ತಿಕ ಸಂಬಂಧದ ಅಗತ್ಯತೆಯನ್ನು ಒತ್ತಿ ಹೇಳದೇ ಇರುವ ಯಾವುದೇ ಪ್ರಸ್ತುತ ಪಡಿಸುವಿಕೆಯು ಈ ಪಾಠಗಳನ್ನು ಪ್ರಸ್ತುತ ಪಡಿಸುವಾಗ, ಶಿಕ್ಷಕನಿಗಿರುವ ಗುರಿಯು ಕಡಿಮೆಯಾಗುವುದು.

ಈ *ಮಾರ್ಗದರ್ಶಿಯಲ್ಲಿಯ* ಎಂಟು ಅಧ್ಯಾಯಗಳೊಂದಿಗೆ ಶಿಕ್ಷಕನು ಪರಿಚಿತನಾದ ತರುವಾಯ, ಅವನು ಪ್ರಸ್ತುತಪಡಿಸಲಿಕ್ಕಿರುವ ಪಾಠದ ಮೇಲೆ ಕೇಂದ್ರೀಕರಿಸತಕ್ಕದ್ದು. ಪಾಠವನ್ನು ಪೂರ್ತಿಯಾಗಿ ಓದಬೇಕು ಮತ್ತು ಪಾಠದಲ್ಲಿ ಇರುವ ಎಲ್ಲದರೊಂದಿಗೆ ಪರಿಚಿತಹೊಂದಬೇಕು ಎಲ್ಲಾ ಪರಿಶುದ್ಧ ಬರಹಗಳನ್ನು ನೋಡತಕ್ಕದ್ದು ಹಾಗೂ ಅವು ಹೇಗೆ ಪಾಠಕ್ಕೆ ಸಂಬಂಧಿಸಿವೆ ಎಂದು ತಿಳಿಯತಕ್ಕದ್ದು. ಇದನ್ನು ಮಾಡಿದ ನಂತರ, ಪಾಠದ ಪ್ರತಿಯೊಂದು ವಿಷಯವನ್ನು ಅವನು ಹೇಗೆ ಪ್ರಸ್ತುತ ಪಡಿಸುವನು ಎಂಬುದನ್ನು ವಿಚಾರಿಸಲು ಸಿದ್ಧನಾಗುವನು.

ಪ್ರತಿಯೊಂದು ಪಾಠವನ್ನು ಸಿದ್ಧಪಡಿಸುವದರಲ್ಲಿ ಮತ್ತು ಪ್ರಸ್ತುತಪಡಿಸುವಲ್ಲಿ ಶಿಕ್ಷಕನಿಗೆ ಸಹಾಯ ಮಾಡಲು ಮುಂದಿನ ವಿಷಯಗಳು ಕೊಡಲ್ಪಟ್ಟಿವೆ. ಈ ಶಿಕ್ಷಕನ *ಮಾರ್ಗದರ್ಶಿಯಲ್ಲಿ* ಸೂಚಿಸಲ್ಪಟ್ಟಂತೆ ವಿಷಯವನ್ನು ನಿರ್ದಿಷ್ಟವಾಗಿ ಶಿಕ್ಷಕನು ಅನುಸರಿಸುವ ಅಗತ್ಯತೆಯಿಲ್ಲ, ಆದರೆ ಪ್ರತಿಯೊಂದು ಪಾಠವನ್ನು ಪ್ರಸ್ತುತಪಡಿಸುವ ಮೊದಲು ಶಿಕ್ಷಕನ ಮಾರ್ಗದರ್ಶಿಯಲ್ಲಿಯ ವಿಷಯವನ್ನು ಅರ್ಥಮಾಡಿಕೊಳ್ಳಲು ಸಮಯ ತೆಗೆದುಕೊಳ್ಳಬೇಕು.



© 2009 Truth for Today